# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**ದಿನಾಂಕ 27 ನೇ ಫೆಬ್ರವರಿ ಮಾಹೆ 2026 ನೇ ಇಸವಿ.**

**ಸಿ.ಸಿ. ನಂಃ 59/2024**

ರಾಜ್ಯ ಸರ್ಕಾರದ ಪರವಾಗಿ
ಪೋಲಿಸ್ ಉಪನಿರೀಕ್ಷಕರು,
ಅಜೆಕಾರು ಪೋಲಿಸ್ ಠಾಣೆ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

1. ರಾಜನ್, 58 ವರ್ಷಗಳು,
ತಂದೆಃ ದಿವಂಗತ ಚಿನ್ನ ತಂಬಿ,
ವಾಸಃ ಕರುಮೊಕರ್ ಅಂಚೆ, ಆಲಗೊಂಬ,
ಕೊಯಂಬತ್ತೂರು

2. ದಿಲೀಪ್ ಶೆಟ್ಟಿ ಯಾನೆ ದಿಲಿಪ್ ಶೆಟ್ಟಿ, 47 ವರ್ಷಗಳು,
ತಂದೆ- ರಘುರಾಮ ಶೆಟ್ಟಿ,
ವಾಸ ಮಾತೃ ಶ್ರೀ ನಿಲಯ,
ಕೆರೆಬೆಟ್ಟು ಗ್ರಾಮ ಹೆಬ್ರಿ ತಾಲೂಕು .

3. ಷಣ್ಮುಗಂ
59 ವರ್ಷಗಳು, ತಂದೆ - ದಿವಂಗತ ಮರಿಮುತ್ತು,
ವಾಸಃಕರಮಡ್ಡೆ ರಸ್ತೆ, ಆಲಂಕೊಂಬು,
ಜಡೆಯಂಪಾಲ್ಯಂ, ಕಾಂಚೀಪುರಂ,
ತಮಿಳುನಾಡು ... ಆಪಾದಿತರು

## ದೋಷಾರೋಪಣೆ

ಶ್ರೀಮತಿ ಶರ್ಮಿಳಾ ಸಿ ಎಸ್., ಬಿ.ಎ.ಎಲ್., ಎಲ್ಎಲ್.ಎಂ ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಮೇಲ್ಕಂಡ ನಿಮ್ಮನ್ನು ಕೆಳಕಂಡಂತೆ ದೋಷಾರೋಪಿಸುತ್ತೇನೆ.

ಮೊದಲನೆಯದಾಗಿ, ಆರೋಪಿತರಾದ ನೀವುಗಳು ಕಳ್ಳತನ ಮಾಡುವ ಏಕೋದ್ದೇಶದಿಂದ ಒಟ್ಟು ಸೇರಿ, ನಿಮ್ಮಲ್ಲಿ 1 ನೇ ಆರೋಪಿಯು

ಸಾಕ್ಷಿ 21 ರವರಿಂದ ಬಾಡಿಗೆಗೆ ಪಡೆದ ಸಾಕ್ಷಿ 21 ರವರ ಮಾಲಕತ್ವದ ಕೆಎ-19-ಎಂಕೆ-7236 ಸಂಖ್ಯೆಯ ಕಾರಿನಲ್ಲಿ ದಿನಾಂಕ 24-06-2022 ರಂದು ರಾತ್ರಿ 1-00 ಗಂಟೆಗೆ ಕಾರ್ಕಳ ತಾಲೂಕು ಶಿರ್ಲಾಲು ಗ್ರಾಮದ ಸೂರ್ಯಂತೊಕ್ಲು ಎಂಬಲ್ಲಿರುವ ಸಾಕ್ಷಿ 5 ನೇಯವರ ಮಾಲಕತ್ವದಲ್ಲಿ ಇರುವ ಸಾಕ್ಷಿ 1 ನೇ ಯವರು ಸಾಕ್ಷಿ 2 ರವರೊಂದಿಗೆ ವಾಸ ಇರುವ ಮಾತೃಚಾಯಾ ಎಂಬ ಹೆಸರಿನ ಮನೆಗೆ ಸಾಕ್ಷಿ 1 ಮತ್ತು 2 ನೇವರು ಬೀಗ ಹಾಕಿ ಹೋಗಿದ್ದ ಸಮಯದಲ್ಲಿ ಮನೆಯ ಬಾಗಿಲಿಗೆ ಹಾಕಿದ ಬೀಗವನ್ನು ಕಬ್ಬಿಣದ ರಾಡ್ ನಿಂದ ಮುರಿದು ಮನೆಯೊಳಗೆ ಅಕ್ರಮ ಪ್ರವೇಶ ಮಾಡಿ , ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 457 ರ ಸಹಿತ ಕಲಂ 34 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೆಯದಾಗಿ , ಆರೋಪಿತರಾದ ನೀವುಗಳು ಕಳ್ಳತನ ಮಾಡುವ ಏಕೋದ್ದೇಶದಿಂದ ಒಟ್ಟು ಸೇರಿ , ನಿಮ್ಮಲ್ಲಿ 1 ನೇ ಆರೋಪಿಯು ಸಾಕ್ಷಿ 21 ರವರಿಂದ ಬಾಡಿಗೆಗೆ ಪಡೆದ ಸಾಕ್ಷಿ 21 ರವರ ಮಾಲಕತ್ವದ ಕೆಎ-19-ಎಂಕೆ-7236 ಸಂಖ್ಯೆಯ ಕಾರಿನಲ್ಲಿ ಮೇಲೆ ತಿಳಿಸಿದ ದಿನಾಂಕ , ಸಮಯ ಮತ್ತು ಸ್ಥಳದಲ್ಲಿ ಸಾಕ್ಷಿ 5 ನೇಯವರ ಮಾಲಕತ್ವದಲ್ಲಿ ಇರುವ ಸಾಕ್ಷಿ 1 ನೇ ಯವರು ಸಾಕ್ಷಿ 2 ರವರೊಂದಿಗೆ ವಾಸ ಇರುವ ಮಾತೃಚಾಯಾ ಎಂಬ ಹೆಸರಿನ ಮನೆಗೆ ಸಾಕ್ಷಿ 1 ಮತ್ತು 2 ನೇವರು ಬೀಗ ಹಾಕಿ ಹೋಗಿದ್ದ ಸಮಯದಲ್ಲಿ ಮನೆಯ ಬಾಗಿಲಿಗೆ ಹಾಕಿದ ಬೀಗವನ್ನು ಕಬ್ಬಿಣದ ರಾಡ್ ನಿಂದ ಮುರಿದು ಮನೆಯೊಳಗೆ ಹೋಗಿ ಒಳಗಿನ ಬಾಗಿಲಿನ ಬೀಗವನ್ನು ಮುರಿದು ನಂತರ ಮನೆಯೊಳಗಿದ್ದ ಕಪಾಟಿನ ಬಳಿ ಇದ್ದ ಬೀಗದ ಕೀಯಿಂದ ಕಪಾಟಿನ ಬಾಗಿಲನ್ನು ತೆಗೆದು ಅದರೊಳಗೆ ಇರುವ ಲಾಕರನ್ನು ಕೀಯಿಂದ ತೆರೆದು ಲಾಕರ್ ನ ಒಳಗಿದ್ದ ಒಟ್ಟು ತೂಕ 112.24 ಗ್ರಾಮ್ ನ ಅಂದಾಜು ರೂ.5,14,000 ಮೌಲ್ಯದ ಬಂಗಾದ ಒಡವೆ ಹಾಗೂ ನಗದು ರೂ.75,000 ನ್ನು ಕಳವು ಮಾಡಿದ್ದು , ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 380 ರ ಸಹಿತ ಕಲಂ 34 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಆರೋಪಿತರಿಗೆ ಮೇಲಿನ ದೋಷಾರೋಪಣೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ. )

(ಶರ್ಮಿಳಾ ಸಿ ಎಸ್ )
ಹಿ. ಸಿ. ನ್ಯಾ ಮತ್ತು ಹೆ. ಮು. ನ್ಯಾ ದಂ .

ಕಾರ್ಕಳ.